**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 316/2014
ಸಿ ಡಬ್ಲುಃ 05
ಪಿ ಡಬ್ಲುಃ 04

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜ ಹರಿಜನ |
| ತಂದೆಯ ಹೆಸರು | ಫಕೀರಪ್ಪ |
| ವಯಸ್ಸು | 46 |
| ಉದ್ಯೋಗ | ಸಮಾಜ ಸೇವೆ |
| ವಾಸ್ತವ್ಯ | ಕೊಪ್ಪ , ಇಂದೂರು. |

ಸಾಕ್ಷಿಯನ್ನು ದಿನಾಂಕ **29.07.2025.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ದಿನಾಂಕಃ 19.07.2014 ರಂದು ನನ್ನನ್ನು ಚಾಸಾ 4 ರವರನ್ನು ಪೋಲಿಸರನ್ನು ನ್ಯಾಯಾಲಯದ ಮುಂದಿರುವ ಆರೋಪಿ ದಾಸನಕೊಪ್ಪಕ್ಕೆ ಕರೆದುಕೊಂಡು ಹೋದನು. ಆರೋಪಿಯು ಅಲ್ಲಿನ ಒಂದು ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು, ಮನೆಯಲ್ಲಿದ್ದ ಒಂದು ಪೆಟ್ಟಿಗೆಯಿಂದ ಗಟ್ಟಿ ಬಂಗಾರ ಮತ್ತು ಹವಳವನ್ನು ತೆಗೆದುಕೊಟ್ಟರು. ಆರೋಪಿಯು ಬಂಗಾರದ ಚೈನ್ ನ್ನು ಹುಬ್ಬಳ್ಳಿಯಲ್ಲಿ ಖರೀದಿಸಿ ತಂದಿರುವುದಾಗಿ ತಿಳಿಸಿದನು. ಸದರಿ ಬಂಗಾರವನ್ನು ಬೆಡಸಗಾಂವ,ಅಟಬೈಲನಲ್ಲಿ ಕಳುವು ಮಾಡಿದಾಗಿ ತಿಳಿಸಿದನು. ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ, ಅವುಗಳನ್ನು ಜಪ್ತುಪಡಿಸಿಕೊಂಡರು. ಸ್ಥಳದಲ್ಲಿ ಛಾಯಾ ಚಿತ್ರವನ್ನೂ ಸಹ ತೆಗೆದುಕೊಂಡರು. ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 1.00 ಗಂಟೆಯವರೆಗೆ ಜರುಗಿಸಿದರು.ನ್ಯಾಯಾಲಯದ ಮುಂದಿರುವ ಜಪ್ತುಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.7** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು ನನ್ನ ಸಹಿಯನ್ನು **ನಿಪಿ.7 ಎ** ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ತೆಗೆದ ಛಾಯಾ ಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ , ಭಾ.ಸ.ಅ.ಕಲಂ 65 ಬಿ ಪ್ರಮಾಣ ಪತ್ರಕ್ಕೆ ಒಳಪಟ್ಟು ಸದರಿ ಛಾಯಾ ಚಿತ್ರವನ್ನು ಅದನ್ನು **ನಿಪಿ.8** ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ.4 ರಲ್ಲಿರುವ ಕಾಣುವ ಬಂಗಾರದ ಗಟ್ಟಿ ಮತ್ತು ಹವಳಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃಶ್ರೀ ಎಂ.ಎ.ಎನ್ ಆರೋಪಿ ಪರ ವಕೀಲರಿಂದಃ**

ನನ್ನ ಊರಿನಿಂದ ದಾಸನಕೊಪ್ಪ ಸುಮಾರು 35 ಕಿ.ಮಿ ಆಗುತ್ತದೆ. ಪೋಲಿಸರು ನಮ್ಮನ್ನು ದಾಸನಕೊಪ್ಪಕ್ಕೆ ಕರೆದಿದ್ದರು. ಪೋಲಿಸ್ ಠಾಣೆಯಿಂದ ದಾಸನಕೊಪ್ಪ 32 ಕಿ.ಮಿ ಇರುತ್ತದೆ. ನಾವು ಇಲ್ಲಿಂದ 9.30 ಗಂಟೆಗೆ ಹೊರಟಿದ್ದು, 10.30 ಗಂಟೆಗೆ ದಾಸನಕೊಪ್ಪದಲ್ಲಿ ಇದ್ದೇವು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿದೆಯೇ ಎಂದರೆ ಹೌದು. ದಾಸನಕೊಪ್ಪದಲ್ಲಿರುವ ಆರೋಪಿಯ ಬಾಡಿಗೆ ಮನೆಗೆ ಅವನೇ ಕರೆದುಕೊಂಡು ಹೋಗಿದ್ದ. ಸದರಿ ಮನೆಯ ಚೆಕ್ ಬಂದಿ ಹೇಳಬಹುದೇ ಎಂದರೆ , 2014 ನೇ ಇಸ್ವಿಯಲ್ಲಿ ಘಟನೆಯಾದ ಕಾರಣ , ನನಗೆ ನೆನಪಿಲ್ಲ. ಪಕ್ಕದಲ್ಲಿ ಮಾಲೀಕರ ಮನೆ ಮತ್ತು ಇನ್ನೊಂದು ಬಾಡಿಗೆ ಮನೆ ಇದೆ ಎಂದು ನುಡಿಯುತ್ತಾರೆ. ದಾಸನಕೊಪ್ಪದಲ್ಲಿ ಗ್ರಾಮ ಪಂಚಾಯತ್ ಇದೆ ಎಂದರೆ ಸರಿ. ಅಲ್ಲಿ ಜನವಸತಿ ಇದೆ ಎಂದರೆ ಸರಿ. ಸ್ಥಳದಲ್ಲಿ ಪೋಲಿಸರು ಜನರಿಗೆ ಪಂಚರಾಗುವಂತೆ ಕೋರಿರುವುದಿಲ್ಲ. ಈ ಹಿಂದೆ ಮುಂಡಗೋಡ ಠಾಣೆಯ ಸಾಕಷ್ಟು ಪ್ರಕರಣದಲ್ಲಿ ಪಂಚ ಮತ್ತು ಸಾಕ್ಷಿದಾರನಾಗಿದ್ದೇನೆ

ಎಂದರೆ ಸರಿಯಲ್ಲ. ನಾನು ಮುಂಡಗೋಡ ಠಾಣೆಯ ಖಾಯಂ ಪಂಚಾ ಎಂದರೆ ಸುಳ್ಳು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪೋಲಿಸರ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದಾಗಲೀ ಜಪ್ತುಪಡಿಸಿಕೊಂಡಿದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಎಲ್ಲಿಯೂ ಕರೆದುಕೊಂಡು ಹೋಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಎಂದಿಗೂ ದಾಸನಕೊಪ್ಪಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ದಾಸನಕೊಪ್ಪದಲ್ಲಿದ್ದ ಆರೋಪಿಯ ಮನೆಯಲ್ಲಿ 3 ಕೋಣೆಗಳಿವೆ. ಸದರಿ ಕೋಣೆಗಳ ಅಗಲ ಮತ್ತು ಉದ್ದವನ್ನು ಅಳತೆ ಮಾಡಿರುವುದಿಲ್ಲ. ಸದರಿ ಮನೆಯ ಅಗಲ ಮತ್ತು ಉದ್ದವನ್ನು ಅಳತೆ ಮಾಡಿರುವುದಿಲ್ಲ. ಟ್ರಜರಿ ಇದ್ದ ಜಾಗದ ಚೆಕ್ ಬಂದಿಯನ್ನು ಹೇಳಬಹುದೇ ಎಂದರೆ, ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಗೋಡೆ ಇದ್ದು, ಉತ್ತರಕ್ಕೆ ಮತ್ತು ದಕ್ಷೀಣಕ್ಕೆ ಬಾಗಿಲು ಇದೆ ಎಂದು ನುಡಿಯುತ್ತಾರೆ. ಅಂದಾಜು 10 ಫೂಟ್ ಅಂತರದಲ್ಲಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಗೋಡೆ ಇದೆ. ಅದೇ ರೀತಿ ಅಂದಾಜು 10 ಫೂಟ್ ಅಂತರದಲ್ಲಿ ಉತ್ತರಕ್ಕೆ ಮತ್ತು ದಕ್ಷೀಣಕ್ಕೆ ಬಾಗಿಲು ಇದೆ. ಪಂಚನಾಮೆಯಲ್ಲಿ ಇದನ್ನು ನಮೂದು ಮಾಡಲಾಗಿದೆಯೇ ಎಂದರೆ ಇಲ್ಲ. ಪಂಚನಾಮೆಯಲ್ಲಿ ಸದರಿ ಜಾಗದ ಚೆಕ್ ಬಂದಿಯನ್ನು ಬರೆದಿದ್ದಾರೆ. ಸಾಕ್ಷಿ ಮುಂದುವರೆದು , ಅವರ ಚೆಕ್ ಬಂದಿಯನ್ನು ಬರೆದಿದ್ದಾರೆ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಛಾಯಾ ಚಿತ್ರಕ್ಕೆ ಮತ್ತು ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ, ಛಾಯಾ ಚಿತ್ರದಲ್ಲಿ ನಾನು ಇದ್ದೇನೆ ಎಂದು ನುಡಿಯುತ್ತಾರೆ. ನಾನು ಅವಾಗ ಅವಾಗ ಪೋಲಿಸ್ ಠಾಣೆಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ದಲೀತ ಸಂಘದ ಅಧ್ಯಕ್ಷ ಇರುವುದರಿಂದ ಆಗಾಗ ಪೋಲಿಸ್ ಠಾಣೆಗೆ ಹೋಗಿ ಬರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಪೋಲಿಸ್ ಜೀಪನಲ್ಲಿ ಹೋಗಿದ್ದು, ನಾನು ವಾಹನದ ನಂಬರನ್ನು ನೋಡಿರುವುದಿಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**